"SATYAVADI" Founded 1917 Regd. No. M. 1299

ಸತ್ಯವಾದಿ

(ಆರಮ್ಭಕ್ಕೆ ಸರಸ್ವೇದಾರ್ ಎಂ. ವಿ. ಸುಬ್ಬರಾಯುರಿಂದ ಸ್ಥಾಪಿಸಲ್ಪಟ್ಟದು)

ಸಂಪುಟ 29 ಸಂಚಿಕೆ 22] ಬುಧವಾರ 24—10—45 [ಬಿಡಿ ಪ್ರತಿ 3 ಪೈ

ಯಹೂದಿಗಳ ಮರ್ದನ !

ಅಕ್ಕಿ !
ಕೆ
ಒಂದು ರೂಪಾಯಿಗೆ ಎರಡೂವರೆ ಸೇರೇ ?

ಮೈಸೂರು, ಅ 24

ಆಹಾರ ವಿಷಯದಲ್ಲಿ ನಿನ್ನೆ ಪ್ರತಿನಿಧಿ ಸಭೆಯಲ್ಲಿ ತೀವ್ರಚರ್ಚೆ ನಡೆದು, ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು, ಭತ್ತದ ಬೆಲೆಯನ್ನು ಅಧಿಕ ಮಾಡಬೇಕೆಂದು ತಮ್ಮ ಭಾಷಣದಲ್ಲಿ ತಿಳಿಸಿದ್ದು ರಾಜಧಾನಿಯ ಪೌರರಲ್ಲಿ ಕಳವಳವನ್ನುಂಟು ಮಾಡಿರುವುದು. 'ಒಂದು ರೂಪಾಯಿಗೆ ಎರಡೂವರೆ ಸೇರು ಅಕ್ಕಿಯಂತೆ. ನವೆಂಬರ್ ಒಂದನೇ ತಾರೀಖಿನಿಂದ ಜಾರಿಗೆ ಬರುವುದಂತೆ' ಎಂದು ಪ್ರಜೆಗಳು ಮಾತನಾಡಿಕೊಳ್ಳುತ್ತಿರುವರು.

ಇದು ನಿಜವೇ ?

ಬಹುಮಾನ ವಿನಿಯೋಗ

ಮೈಸೂರು ಅ 24

ನಿನ್ನೆ ಯ ದಿವಸ ಸಂಜೆ 6 ಘಂಟೆಯಲ್ಲಿ ಶ್ರೀಮತಿ ತಾಬೂಚೆಟ್ಟಿಯವರು ದಸರಾ ವಸ್ತು ಪ್ರದರ್ಶನದ ಬಹುಮಾನಿತರುಗಳಿಗೆ ಬಹುಮಾನಗಳನ್ನು ಹಂಚಿದರು.

ಶ್ರೀ ಟಿ ಪಿ ಕೈಲಾಸಂ

ಮೈಸೂರು, ಅ 24

ಗುಬ್ಬಿ ಕಂಪೆನಿ ವಜ್ರೋತ್ಸವ ಸಮಾರಂಭದ ದ್ವಿತೀಯ ದಿವಸದ ಅಧ್ಯಕ್ಷತೆಯನ್ನು ಕರ್ನಾಟಕದ ಸುಪ್ರಸಿದ್ಧ ಸಾಹಿತಿ ಮತ್ತು ಕನ್ನಡ ಸಾಹಿತ್ಯ ಸಮ್ಮೇಳನದ್ಯಕ್ಷ ಅಧ್ಯಕ್ಷತೆಯನ್ನು ಶ್ರೀ ಟಿ ಪಿ ಕೈಲಾಸಂರವರು ಅಲಂಕರಿಸಿದರು.

ಕನ್ನಡ ಚಲನಚಿತ್ರ

ಮೈಸೂರು, ಅ 24

ಶ್ರೀ ಜಿ. ಆರ್. ರಾಮಯ್ಯನವರು ನಿರ್ಮಿಸಿರುವ 'ಶ್ರೀ ಕೃಷ್ಣಲೀಲಾ' ಚಿತ್ರದ ಶೂಟಿಂಗ್ ನವೆಂಬರ್ 12 ರಲ್ಲಿ ನವಜ್ಯೋತಿ ಸ್ಟೂಡಿಯೋವಿನಲ್ಲಿ ಪ್ರಾರಂಭವಾಗುವುದಾಗಿ ಹೇಳಲಾಗಿದೆ.

ಅರ್ಜೆಂಟೈನಾವು ಹಿಟ್ಲರಿನ ಜರ್ಮನಿಯಂತೆ ಕಾಣಬಾರದೆಂದೂ ಯಹೂದ್ಯರ ಮೇಲೆ ಹಿಂಸಾಕೃತ್ಯಗಳು ಹೆಚ್ಚಾಗಿರುವುದೆಂದೂ, ಯಹೂದ್ಯರ ಮರ್ದನಕ್ಕೆ ಅಲ್ಲಿಯ ಪೋಲಿಸರ ಸಹಾಯವಿರುವುದಾಗಿ ಸ್ಪಷ್ಟವಾಗಿದೆ.

ಂ ಂ

ಡೆನ್ಮಾರ್ಕ್ ಮತ್ತು ನಾರ್ವೆ ಮಧ್ಯೆ ಉತ್ತರ ಸಾಗರದ ಅತಿ ಆಳವಾದ ಭಾಗವಾದ ಸ್ಕಾಗೆರಾಕಿನಲ್ಲಿ ಎರಡು ಲಕ್ಷ ಟನ್ ಜರ್ಮನ್ ವಿಷವಾಯುವು ಮುಳುಗಿಸಲ್ಪಡುವುದಾಗಿ ಹೇಳಲಾಗಿದೆ.

ಂ ಂ

ಜರ್ಮನರು ನಾಜೀ ಆಡಳಿತಕ್ಕಿಂತ ಹೆಚ್ಚಾಗಿ ಈಗ ಕಂದಾಯ ಕೂಡಬೇಕೆಂದು ಮಿತ್ರ ಹತೋಟಿ ತೀರ್ಮಾನ.

ಂ ಂ

ಬ್ರಿಟಿಷ್ ರಾಜರು ಮಾಜಿ ಮುಖ್ಯ ಮಂತ್ರಿ ಚರ್ಚಿಲರಿಗೆ ಕ್ಯಾಂಪೇನ್ ಮೆಡಲುಗಳನ್ನು ಸ್ವತಃ ಕೊಟ್ಟಿಕುವರು.

ಂ ಂ

ಆಪಾದಿತರಾಗಿರುವ ಭಾರತ ರಾಷ್ಟ್ರೀಯ ಸೇನಿಕರು ತಮ್ಮನ್ನು ಕಾಂಗ್ರೆಸ್ಸೇ ರಕ್ಷಿಸಬೇಕೆಂದು ಮತ್ಯಾವ ಜಾತಿ ಸಂಸ್ಥೆಯು ಬೇಡವೆಂದು ತಿಳಿಸಿರುವುದಾಗಿ ಹೇಳಲಾಗಿದೆ.

ಂ ಂ

ಡಚ್ ಈಸ್ಟ್ ಇಂಡೀಸಿಗೆ ಡಚ್ಚರ ಸಹಾಯಕ್ಕೆ ಭಾರತೀಯ ಸೈನ್ಯಗಳನ್ನು ಕಳುಹಿಸಬೇಕೆಂದು ಬ್ರಿಟಿಷ್ ಸರ್ಕಾರದ ಕೇಳಿಕೆಯನ್ನು ಭಾರತ ಸರ್ಕಾರ ನಿರಾಕರಿಸಿದೆಯೆಂದು ಗೊತ್ತಾಗಿದೆ.

ಂ ಂ

ಸೂರತ್ ನಗರದ ಒಂದು ಪೋಸ್ಟಾಫೀಸಿನಲ್ಲಿ ಏಳು ವರ್ಷಗಳ ಹಿಂದೆ ಹಾಕಿದ್ದ ಕಾಗದವು ಅದೇ ಊರಿನಲ್ಲಿಯ ಮುಸ್ಲಿಂ ಲೀಗ್ ಆಫೀಸಿಗೆ ಈ ತಿಂಗಳು 21 ರಲ್ಲಿ ಕೊಡಲಾಗಿದೆ.

ಕನ್ನಡ ರಂಗಭೂಮಿಯ ಶತಮಾನೋತ್ಸವ ಮತ್ತು ಗುಬ್ಬಿ ಶ್ರೀ ಚನ್ನಬಸವೇಶ್ವರಸ್ವಾಮಿ ನಾಟಕ ಸಂಸ್ಥೆಯ ವಜ್ರೋತ್ಸವ

— ಸಮಾರಂಭ ಸಮಿತಿಯ ಪರಿಚಯ —

ಕರ್ನಾಟಕ ದಕ್ಷಿಣಾಂತರಾಧೀಶ್ವರರ ಅಮೋಘ ಉದಾರಾಶ್ರಯ ಪ್ರೋಷಣೆಗಳಿಂದಲೂ, ಕನ್ನಡ ಜನತೆಯ ಸಹಕಾರದಿಂದಲೂ, ಕನ್ನಡ ರಂಗಭೂಮಿಯು ಶತಮಾನವನ್ನು ಮುಟ್ಟಿರುವುದಲ್ಲದೆ. ಗುಬ್ಬಿ ಶ್ರೀ ಚನ್ನಬಸವೇಶ್ವರ ಸ್ವಾಮಿ ನಾಟಕ ಸಂಸ್ಥೆಯು ಕನ್ನಡ ರಂಗಭೂಮಿಗೆ ಕಳೆದ 60 ವರ್ಷಗಳಿಂದ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿ ಯಶಸ್ಸು ಪಡೆದಿರುವುದು ಸರಿಯಷ್ಟೆ.

ದೀರ್ಘಕಾಲದ ಸೇವೆಯ ಮೂಲಕ, ಕನ್ನಡ ಜನತೆಯಲ್ಲಿ ನಾಟಕ ಸಂಸ್ಥೆಯ ಶತಮಾನೋತ್ಸವ ಮತ್ತು ಗುಬ್ಬಿ ಕಂಪೆನಿಯ ವಜ್ರೋತ್ಸವವನ್ನು ಸಾರ್ವಜನಿಕವಾಗಿ ನೆರವೇರಿಸುವುದು ಉಚಿತವೆಂದು ಅಭಿಪ್ರಾಯಪಟ್ಟು ಕನ್ನಡ ನಾಟಕಾಭಿಮಾನಿಗಳು ಮೈಸೂರಿನಲ್ಲಿ ಈ ಉತ್ಸವವನ್ನು ನಡೆಯಿಸಲು ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳಲು ಕಳೆದ ಡಿಸೆಂಬರು ಮಾಹೆಯಲ್ಲಿ ಒಂದು ಉತ್ಸವ ಸಮಿತಿಯನ್ನು ರಚಿಸಲಾಯಿತು.

ಈ ಸಮಿತಿಗೆ ರಾಜಸೇವಾಸಕ್ತ ಅಂಬಳೆ ಸುಬ್ರಹ್ಮಣ್ಯಅಯ್ಯರ್‌ರವರು (ನಿವೃತ್ತ ಎಕ್ಸೈಜ್ ಕಮಿಷನರ್) ಅಧ್ಯಕ್ಷರಾಗಿಯೂ, ಮು || ರಾ || ಗಳಾದ ಸಿ. ಪೆರುಮಾಲ್ ಶೆಟ್ಟಿ (ಪ್ರೊ || ಸಿ. ಪಿ. ಸಿ ಮೋಟಾರು ಸರ್ವಿಸ್), ಕೆ. ಸಿ. ಸುಬ್ಬಣ್ಣನವರು (ಡಿ || ಬೋರ್ಡ್ ಪ್ರೆಸಿಡೆಂಟ್), ಮತ್ತು ವಿ ನಾರಾಯಣ್ (ಸೂಲು ವ್ಯಾಪಾರಿ ಮತ್ತು ಮ್ಯಾ || ಡೈ || ವಿ ಜೈಶಂಕರ್ ಫಿಲ್ಮ್ ಕಾರ್ಪೊರೇಷನ್) ರವರು ಉಪಾಧ್ಯಕ್ಷರುಗಳಾಗಿಯೂ, ಮು || ರಾ || ಗಳಾದ ಜಿ. ಆರ್. ರಾಮಯ್ಯ (ಪ್ರೊ || ಟ್ರಾನ್ಸ್‌ಪೋರ್ಟ್ ಮೋಟಾರ್ ಸರ್ವಿಸ್) ನವರು ಮತ್ತು ಕೆ. ನಂದೀಬಸಪ್ಪ (ಎಕ್ಸೈಜ್ ಕಂಟ್ರಾಕ್ಟರ್) ನವರು ಗೌರವ ಕಾರ್ಯದರ್ಶಿಗಳಾಗಿಯೂ, ಮು || ರಾ || ಎಂ. ಸಿ ಮಹದೇವಸ್ವಾಮಿಯವರು (ಮ್ಯಾನೇಜಿಂಗ್ ಡೈರೆಕ್ಟರ್, ಗುಬ್ಬಿ ಥಿಯೇಟ್ರಿಕಲ್ ಕಂಪೆನಿ) ಪ್ರಧಾನ ವ್ಯವಸ್ಥಾಪಕರಾಗಿಯೂ, ಕರ್ನಾಟಕದ ಎಲ್ಲಾ ಭಾಗಗಳಿಂದ ಸಮಿತಿಯ ಸದಸ್ಯರನೇಕರು ಚುನಾಯಿಸಲ್ಪಟ್ಟಿರುತ್ತಾರೆ

ಕನ್ನಡ ರಂಗಭೂಮಿಯು ಆಧುನಿಕ ರೂಪದಲ್ಲಿ ಆರಂಭವಾಗಿ ಈಗಾಗಲೆ ನೂರು ವರ್ಷಗಳಾಗಿರುವುದರಿಂದಲೂ, ಜಗತ್ತಿನ ಜೀವನದಲ್ಲಿ ಪ್ರಚಂಡವಾದ ಮಾರ್ಪುಗಳಾಗುವ ಸ್ಪಷ್ಟ ಸೂಚನೆಗಳು ತೋರುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಕನ್ನಡ ರಂಗಭೂಮಿಯ ಭವಿಷ್ಯವು ಪ್ರಗತಿಪರ ಮಾರ್ಗದಲ್ಲಿ ಪುಷ್ಟವಾಗಿ ರೂಪುಗೊಂಡು ಸರ್ವಜನಕವಾದ ರೀತಿಯಲ್ಲಿ ಜನತೆಯು ಸೇವೆಯನ್ನು ನೆರವೇರಿಸಿದಂತಾಗುವುದು ಅವಶ್ಯಕವಾಗಿರುವುದರಿಂದಲೂ, ಕನ್ನಡ ರಂಗಭೂಮಿಯ ಶತಮಾನೋತ್ಸವವನ್ನು ಮತ್ತು ಗುಬ್ಬಿ ಕಂಪೆನಿಯ ವಜ್ರೋತ್ಸವವನ್ನು ನೆರವೇರಿಸುವುದು ಉಚಿತವೆಂದು ನಿರ್ಣಯಿಸಿದ್ದಾರೆ.

ಈ ಉತ್ಸವಗಳ ಮೂಲಕ ಜನತೆಯಲ್ಲಿ ರಂಗಭೂಮಿಯ ಬಗ್ಗೆ ನವೋತ್ಸಾಹವನ್ನೂ, ಪ್ರಬಲ ಆಸಕ್ತಿಯನ್ನೂ ಪ್ರೇರೇಪಿಸಬೇಕೆಂಬುದೇ ಸಮಿತಿಯ ಮತ ಪ್ರಧಾನ ಉದ್ದೇಶವಾಗಿದೆ. ಈ ಉದ್ದೇಶ ಸಾಧನೆಗಾಗಿ ಈ ಕೆಳಗೆಕಂಡ ಕಾರ್ಯಕ್ರಮವನ್ನು ಒಂದು ವಾರದವರೆವಿಗೆ ನೆರವೇರಿಸಬೇಕೆಂದು ಸಮಿತಿಯವರು ನಿರ್ಧರಿಸಿದ್ದಾರೆ.

— ಉದ್ದಿಶ್ಯ ಕಾರ್ಯಕ್ರಮ —

೧ ಇಡೀ ಕನ್ನಡನಾಡಿನ ಗೌರವಾಭಿಮಾನಗಳಿಗೆ ಪಾತ್ರರಾದ ಪೂಜ್ಯರಿಂದ ಆರಂಭೋತ್ಸವವನ್ನು ನೆರವೇರಿಸುವುದು. ೨ ಕನ್ನಡ ರಂಗಭೂಮಿಯ ಶತಮಾನೋತ್ಸವ ಗ್ರಂಥವನ್ನು ಸಮಿತಿಯವರು ಕಾಣಿಕೆಯಾಗಿ ಪ್ರಕಟಿಸಿ ಜನತೆಯಲ್ಲಿ ನಾಟಕ ಕಲೆಯ ವಿಚಾರದಲ್ಲಿ ತಿಳಿವಳಿಕೆಯನ್ನು ಹೆಚ್ಚಿಸುವುದು ೩ ಉದಕ್ಕಾಗಿ ನಾಟಕರತ್ನ ಶ್ರೀ ಜಿ ಹೆಚ್. ವೀರಣ್ಣನವರು ಹತ್ತು ಸಹಸ್ರ ರೂಪಾಯಿಗಳನ್ನು ಕೂಟ್ಟಿರುತ್ತಾರೆ. ೪ ಕನ್ನಡ ರಂಗಭೂಮಿಗೆ ಸಲ್ಲಿಸಿರುವ ದೀರ್ಘ ಕಾಲ ಸೇವೆಗಾಗಿ ಈ ಸಮಾರಂಭದಲ್ಲಿ ನಾಟಕರತ್ನ ಶ್ರೀ ಜಿ. ಹೆಚ್. ವೀರಣ್ಣನವರನ್ನು ಸನ್ಮಾನಿಸುವುದು. ೫ ಈ ಉತ್ಸವದ ಜ್ಞಾಪಕಾರ್ಥವಾಗಿ ಕನ್ನಡ ನಾಟಕ ಕಲಾಮಂದಿರವನ್ನು ರಾಜಧಾನಿಯಲ್ಲಿ ಸ್ಥಾಪಿಸುವುದು. ೬ ಕನ್ನಡ ನಾಟಕಕಲಾ ಸಮ್ಮೇಳನ. ೭ ನಾಟಕ ಪ್ರಯೋಗ ಸ್ಪರ್ಧೆ ಮತ್ತು ಬಹುಮಾನ ವಿನಿಯೋಗ. ೮ ನಿರುದ್ಯೋಗಿಗಳಾಗಿಯೂ, ಸಹಾಯಕ್ಕೆ ಅರ್ಹರಾಗಿರುವ ನಟ ನಟಿಯರಿಗಾಗಿ ನಿಧಿಯನ್ನು ಏರ್ಪಡಿಸುವುದು. ೯ ಕಲಾಭಿಮಾನಿಗಳ

ಸಮ್ಮೇಳನ, ಪರಿಷತ್ತು ಮತ್ತು ಪ್ರಾಜ್ಞರ ಭಾಷಣಗಳು. ೯ ರಂಗೋಪಕರಣಗಳ ಪ್ರದರ್ಶನ. ೧೦ ಮೇಲ್ಕಂಡ ಉತ್ಸವದ ಕೈಪಿಡಿಯನ್ನು ಪ್ರಕಟಿಸುವುದು.

ಈ ಮಹಾತ್ಕಾರ್ಯಕ್ಕೆ ನಾಟಕರತ್ನ ಜಿ. ಹೆಚ್. ವೀರಣ್ಣನವರು ಮಹದಾನಂದದಿಂದ ಸಹಾಯಸಂಪತ್ತುಗಳನ್ನು ತಮ್ಮ ಶಕ್ತಿಮೀರಿ ಸಲ್ಲಿಸಿರುತ್ತಾರೆ.

ಕರ್ನಾಟಕದ ಮಹಾಜನರೆಲ್ಲರೂ ಉದಾರ ಮನಸ್ಸಿನಿಂದ ದ್ರವ್ಯ ಸಹಾಯ ಮತ್ತು ಸಲಹೆಗಳನ್ನು ನೀಡಿ ಈ ಮಹತ್ಕಾರ್ಯವನ್ನು ಸಾಂಗವಾಗಿ ನೆರವೇರಿಸಬೇಕಾಗಿ ಪ್ರಾರ್ಥನೆ

ಈ ಸಮಿತಿಯ ಪ್ರಧಾನ ವ್ಯವಸ್ಥಾಪಕರಾದ ಮು|| ರಾ|| ಮಹಾದೇವ ಸ್ವಾಮಿಯವರು ನಿಧಿ ಸಂಗ್ರಹಕ್ಕಾಗಿ ಸಂಚರಿಸುತ್ತಿರುವರು. ಅವರು ತಮ್ಮಲ್ಲಿಗೆ ಬಂದಾಗ ತಾವು ತಮ್ಮ ಸಹಾಯವನ್ನು ಕೊಟ್ಟು ಪೋಷಕರಾಗಿಯೂ, ಸದಸ್ಯರಾಗಿಯೂ ದ್ರವ್ಯಸಹಾಯ ಮಾಡಬೇಕಾಗಿ ಕೋರುತ್ತೇವೆ

ಒಂದು ನೂರು ರೂಪಾಯಿ ಅಥವಾ ಅದಕ್ಕೆ ಮೇಲ್ಪಟ್ಟು ಕೊಡುವವರು ಪೋಷಕರಾಗಿಯೂ, ಐದು ರೂಪಾಯಿ ಅಥವಾ ಅದಕ್ಕೆ ಮೇಲ್ಪಟ್ಟು ಕೊಡುವವರು ಸದಸ್ಯರಾಗಿಯೂ ಪರಿಗಣಿಸಲ್ಪಡುವುದಲ್ಲದೆ ಸಾರ್ವಜನಿಕರಿಂದ ಅಭಿಮಾನಪೂರ್ವಕವಾಗಿ ಕೊಡಲ್ಪಡುವ ಅಲ್ಪ ಧನವನ್ನೂ ಸಹಾ ಸ್ವೀಕರಿಸಲಾಗುವುದು.

ಅಭಿಮಾನಿಗಳು ಸಹಾಯದ ಮೊಬಲಗನ್ನು ನಮ್ಮ ವ್ಯವಸ್ಥಾಪಕರಲ್ಲಿ ಪಾವತಿ ಮಾಡಬಹುದು ಅಥವಾ ಗೌರವ ಕಾರ್ಯದರ್ಶಿಗಳಿಗೆ ಮನಿಯಾರ್ಡರ್ ಮೂಲಕವಾಗಲೀ, ಚಕ್ ಮೂಲಕವಾಗಲೀ ರವಾನಿಸಬೇಕಾಗಿ ಪ್ರಾರ್ಥನೆ.

ಪ್ರಧಾನ ಕಛೇರಿ : ಅಂಬಳಿ ಸುಬ್ರಹ್ಮಣ್ಯಐಯ್ಯರ್.
ಅಶೋಕ ರಸ್ತೆ, ಮೈಸೂರು. ಅಧ್ಯಕ್ಷರು

ಜಿ. ಆರ್. ರಾಮಯ್ಯ, ಕೆ. ನಂದೀಬಸಪ್ಪ.
ಗೌ || ಕಾರ್ಯದರ್ಶಿಗಳು

ಡಿಸೆಂಬರ್ 1945 — ಕಾರ್ಯಕ್ರಮ

ಮೊದಲನೆ ದಿನ— 1. ಪ್ರದರ್ಶನ (ಎಗ್ಜಿಬಿಷನ್) 2. ಸ್ಟೇಜ್ ಡೆವಲಪ್‌ಮೆಂಟ್ (ಚಿತ್ರಸಮೇತ ಭಾಷಣ. ಬೆಳಿಗ್ಗೆ : ಎಲ್ಲಾ ಅಹ್ವಾನಿತರ ಸಭೆ. ಕರ್ನಾಟಕದ ಗೌರವಾಭಿಮಾನಿಗಳಿಗೆ ಪಾತ್ರರಾದ ಪೂಜ್ಯನುಹಾಮಹಿಮರಿಂದ ಆರಂಭೋತ್ಸವನನ್ನು ನೆರವೇರಿಸುವುದು. ಸಾಯಂಕಾಲ ; ಗುಬ್ಬಿ ಶ್ರೀ ಜನ್ನ ಬಸವೇಶ್ವರಸ್ವಾಮಿ ಥಿಯೇಟ್ರಿಕಲ್ ಕಂಪೆನಿಯ ವಜ್ರೋತ್ಸವ ಸಮಾರಂಭದಲ್ಲಿ ಶ್ರೀಮಾ|| ನಾಟಕರತ್ನ ಜಿ. ಎಚ್. ವೀರಣ್ಣನವರಿಗೆ ಸನ್ಮಾನ ಮತ್ತು ನಾಟಕ ಪ್ರದರ್ಶನ ಇತ್ಯಾದಿ.

2 ನೇ ದಿನ— ಬೆಳಿಗ್ಗೆ ನಾಟಕ ಪರಿಷತ್ತು. ಸಮ್ಮೇಳನ ಮತ್ತು ಪ್ರಾರಂಭೋತ್ಸವ. ಸ್ವಾಗತ ಸಮಿತಿಯ ಅಧ್ಯಕ್ಷರ ಭಾಷಣ. ಮಧ್ಯಾಹ್ನ 3 ರಿಂದ 4 ರವರೆಗೆ ಪ್ರದರ್ಶನ (ಎಗ್ಜಿಬಿಷನ್, ಪ್ರತಿನಿತ್ಯವೂ) ಸಾಯಂಕಾಲ 7 ರಿಂದ 9 ರವರೆಗೆ ನಾಟಕ ಸ್ಪರ್ಧೆ (ಮ್ಯಾಟಿನಿ). ರಾತ್ರಿ 10 ರಿಂದ 1 ರವರೆಗೆ ನಾಟಕ ಪ್ರದರ್ಶನ.

3 ನೇ ದಿನ— ಬೆಳಿಗ್ಗೆ ; ನಟರ ಸಮ್ಮೇಳನ, ಭಾಷಣ. ಸಾಯಂಕಾಲ 7 ರಿಂದ 9 ರವರೆಗೆ ಮ್ಯಾಟಿನಿ. ರಾತ್ರಿ 10 ರಿಂದ 1 ರವರೆಗೆ ನಾಟಕ ಪ್ರದರ್ಶನ.

4 ನೇ ದಿನ— ಬೆಳಿಗ್ಗೆ : ನಾಟಕಕಾರರ ಸಮ್ಮೇಳನ ಚರ್ಚೆ. ಸಾಯಂಕಾಲ 7 ರಿಂದ 9 ರವರೆಗೆ ಮ್ಯಾಟಿನಿ. ರಾತ್ರಿ 10 ರಿಂದ 1 ರವರೆಗೆ ನಾಟಕ ಪ್ರದರ್ಶನ.

5 ನೇ ದಿನ— ಬೆಳಿಗ್ಗೆ ; ರಂಗಮಂಟಪದ ಸ್ವಪಕಾರಕರ ಸಮ್ಮೇಳನ. ಸಾಯಂಕಾಲ 7 ರಿಂದ 9 ರವರೆಗೆ ಮ್ಯಾಟಿನಿ. ರಾತ್ರಿ 10 ರಿಂದ 1 ರವರೆಗೆ ನಾಟಕ ಪ್ರದರ್ಶನ.

6 ನೇ ದಿನ— ಬೆಳಿಗ್ಗೆ ; ನಾಟ್ಯಕಲಾ ಸಮ್ಮೇಳನ ಸಾಯಂಕಾಲ 7 ರಿಂದ 9 ರವರೆಗೆ ಮ್ಯಾಟಿನಿ. ರಾತ್ರಿ 10 ರಿಂದ 1 ರವರೆಗೆ ನಾಟಕ ಪ್ರದರ್ಶನ.

7 ನೇ ದಿನ— ಬೆಳಿಗ್ಗೆ ನಾಟಕ ಕಲೆ ಮತ್ತು ಚಲನಚಿತ್ರಗಳ ವಿಮರ್ಶನ, ಭಾಷಣ ಇತ್ಯಾದಿ. ಸಾಯಂಕಾಲ 7 ರಿಂದ 9 ರವರೆಗೆ ಮ್ಯಾಟಿನಿ. ರಾತ್ರಿ 10 ರಿಂದ 1 ರವರೆಗೆ ನಾಟಕ ಪ್ರದರ್ಶನ.

8 ನೇ ದಿನ — ಬೆಳಿಗ್ಗೆ ; ವಿಮರ್ಶಕರ (ಜಡ್ಜಸ್) ಸಭೆ ಮತ್ತು ಭಾಷಣ. ಮಧ್ಯಾಹ್ನ, ಔತಣ. ಸಾಯಂಕಾಲ, ಸಮ್ಮೇಳನ, ಬಹುಮಾನ ವಿನಿಯೋಗ, ವಂದನಾರ್ಪಣೆ, ರಾಷ್ಟ್ರಗೀತೆ.



ಆ ಮ ಶ ಂ ಕೆ
ಅ ತಿ ಸಾ ರ ಗ ಳಿ ಗೆ
.... ಖಾತ್ರಿ ....
ಗು ಣ ಕಾ ರಿ ಯಾ ದ
ಡಿಸೆಂಟಿಸೆಡ್
ಲ
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ಟಾಕಿಸ್ಟರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹಂಚುವವರು —
ಕಾಂತರಾಜ್ ಅಂಡ್ ಕೊ.
ರವೆ ಬೀದಿ, ಮೈಸೂರು.

Edited, Printed and published by M. S. Krishna Rao, at the Satvavadi Press, Chamaraja Agrahar, Mysore

AT Opera—
3 nd Week
ರಂಜಕ್, ಟಿ ಆರ್, ರಾಜಕುಮ್ಮಾ
ಕೆ. ಎಲ್. ವಿ. ವಸಂತ,
ಕೃಷ್ಣ, ಮಧುರಂ ಪಾತ್ರವಹಿಸಿರುವ
ಶಾಲಿವಾಹನ
Morning Shows
From 26-10-45
In Old California
At Ranjit
Humayun
7 ನೇ ವಾರ
ರಣಜಿತ್ ಟಾಕೀಸಿನಲ್ಲಿ
.... ಹುಮಾಯೂರ್....
ಅಶೋಕ ಕುಮಾರ್, ಚಂದ್ರಮೋಹನ್
ನೀಣಾ, ಸರ್ವಿಸ್,, ಷಾ ನವಾಸ್
ಪಾತ್ರವಹಿಸಿರುವರು

ಸುಖ ಆರೋಗ್ಯ ಆನಂದದಾಯಕ
ಶ್ರೀ
ಜೀ ವಿ ತ ಕ್ಕೆ

ಸ್ಟೀಮರ್ ಮಾರ್ಕಿನ ಉತ್ಕೃಷ್ಟ
ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಪಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗ್ಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಪುಡ್ಡು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವರಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್‌ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯಕ ರಸ್ತೆ, ಜಿ. ಟಿ. ಮದರಾಸು.